and other Government business shall be completed."

So it is only in respect of Bills and other Government Business that the Business Advisory Committee has powers to fix the dates. But so far as non-official business is concerned, it does not fix the dates and time; it is fixed by the Chair.

Sri A. BHEEMAPPA NAIK.—Obviously when Government business is fixed by the Business Advisory Committee and if the dates are changed then their work is interfered with. One is inter-related with the other.

Mr. SPEAKER.—In this respect, the Business Advisory Committee has not fixed any time at all. The Business Advisory Committee fixed time in respect of certain Bills. Those Bills have been taken up and finished. So far as the present position is concerned, the Business Advisory Committee has not fixed timings for Government Business because Government have not given an idea as to what Bills are going to be taken up.

Resolution No. 1—Setting up of an Enquiry Commission to investigate into the affairs of the Spun Silk Mills Ltd., Channapatna.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ:—

"ಚನ್ನಪಟ್ಟಣದ ಸ್ಪನ್ ಸಿಲ್ಕ್‌ಮಿಲ್ಸ್ ಲಿಮಿಟೆಡ್, ಇದರ ವ್ಯವಸ್ಥೆಯಲ್ಲಿ ಸರ್ಕಾರದವರು ಹಸ್ತಕ್ಷೇಪ ಮಾಡುವುದರಿಂದ ಡೈರೆಕ್ಟರ ಮಂಡಲದ ಅಧ್ಯಕ್ಷರು ರಾಜಿನಾಮೆ ಕೊಟ್ಟಿರುವ ಬಗ್ಗೆ ಮತ್ತು ತತ್ಸಂಬಂಧದ ಇನ್ನುಳಿದ ಎಲ್ಲ ವಿಷಯಗಳ ಬಗ್ಗೆ ವಿವರವಾಗಿ ವಿಚಾರಣೆ ನಡೆಸಲು ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಂದ ಕೂಡಿದ ಒಂದು ವಿಚಾರಣಾ ಸಮಿತಿಯನ್ನು ರಚಿಸತಕ್ಕುದೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

Mr. SPEAKER.—Motion moved:

"This Assembly is of the opinion that an Enquiry Commission consisting of the Chief Justice of the Mysore High Court be set up to investigate into the details regarding the interference by the Government in the management of the Spun Silk Mills, Ltd., Channapatna, resulting in the resignation of the Chairman of the Board of Directors and all other matters relevant thereto."

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಚನ್ನಪಟ್ಟಣದಲ್ಲಿರತಕ್ಕ ಸ್ಪನ್‌ಸಿಲ್ಕ್ ಫ್ಯಾಕ್ಟರಿ ಒಂದೇ ಒಂದು ನಮ್ಮ ಭಾರತ ದೇಶಕ್ಕೆಲ್ಲ ಇರತಕ್ಕದ್ದು. ಸರ್ ಮಿರ್ಜಾಸಾಹೇಬರು ದಿವಾನರಾಗಿದ್ದಾಗ, 1936ನೇ ಇಸವಿಯಲ್ಲಿ ಈ ಒಂದು ಕಂಪೆನಿಯನ್ನು ಪ್ರಾರಂಭ ಮಾಡಿದರು. ಇದರಲ್ಲಿ ಸರ್ಕಾರದವರು ಶೇಕಡ 10ರಷ್ಟು ಷೇರುಗಳನ್ನು ತೆಗೆದುಕೊಂಡಿದ್ದಾರೆ. ಉಳಿದ ಶೇಕಡ 90 ಷೇರುಗಳನ್ನು ಜನರು ತೆಗೆದುಕೊಂಡಿದ್ದಾರೆ. ಸರ್ಕಾರದವರು ಹತ್ತನೇ ಒಂದು ಭಾಗದ ಷೇರುಗಳನ್ನು ತೆಗೆದುಕೊಂಡಿರುವುದರಿಂದ ಒಬ್ಬ ಚೇರ್‌ಮ್ಯಾ ಮತ್ತು ಮೂರು ಜನ ಡೈರೆಕ್ಟರುಗಳನ್ನು ನಾಮಿನೇಟ್ ಮಾಡುತ್ತಾರೆ. ಆರು ಜನ ಡೈರೆಕ್ಟರುಗಳು ಚುನಾವಣೆಯಲ್ಲಿ ಬರುತ್ತಾರೆ. ಸರ್ಕಾರದವರಿಂದ ನಾಮಕರಣವಾಗಿರುವ ಮೂರು ಜನ ಡೈರೆಕ್ಟರುಗಳ ಪೈಕಿ ಒಬ್ಬರನ್ನು ಆ ಕಂಪೆನಿಯ ಚೇರ್‌ಮ್ಯಾ ಆಗಿ ಮೊದಲನಿಂದಲೂ ನೇಮಿಸುತ್ತ ಇದ್ದಾರೆ. ನಮ್ಮ ಮೈಸೂರು ದೇಶದಲ್ಲಿ ಹೆಚ್ಚಿಗೆ ರೇಷ್ಮೆವ್ಯವಸಾಯಗಾರರಿರುವುದರಿಂದ ರೇಷ್ಮೆವೇಸ್ಟ್ ಹಾಳುಮಾಡಬಾರದು, ಇದಕ್ಕೂ ಹೆಚ್ಚುಬೆಲೆ ಬರುವಹಾಗೆಮಾಡಿ ರೈತಾಪಿ ಜನರಿಗೆ ಅನುಕೂಲವಾಗಬೇಕು ಎಂದು ರೈತರ ಹಿತ ದೃಷ್ಟಿಯಿಂದ ಆಗಿನ ಸರ್ಕಾರ ಸ್ಪನ್‌ಸಿಲ್ಕ್ ಫ್ಯಾಕ್ಟರಿಯನ್ನು ಸ್ಥಾಪನೆಮಾಡಿತು. ಈ ಫ್ಯಾಕ್ಟರಿಯು ಸರಿಯಾದ ಸ್ಥಿತಿಯಲ್ಲಿ ನಡೆಯದೆ ಇದ್ದರೆ, ನಷ್ಟದಲ್ಲಿ ನಡೆದರೆ ಸರ್ಕಾರಕ್ಕೆ ಮತ್ತು ಷೇರ್ ಹೋಲ್ಡರುಗಳಿಗೆ ಮಾತ್ರವಲ್ಲ ದೇಶದ ಎಲ್ಲ ರೇಷ್ಮೆ ವ್ಯವಸಾಯಗಾರರಿಗೂ ತೊಂದರೆಯಾಗುತ್ತದೆಂಬ ಅಂಶ ಎಲ್ಲರಿಗೂ ಗೊತ್ತಿದೆ. ಈ ಕಂಪೆನಿಯಲ್ಲಿ 1952ರ ವರೆಗೂ 1,300 ಜನ ಕೆಲಸಗಾರರು ಕೆಲಸ ಮಾಡುತ್ತಿದ್ದರು. ಅಡ್ಮಿನಿಸ್ಟ್ರೇಟಿವ್ ಮತ್ತು ಎಕ್ಸಿಕ್ಯೂಟಿವ್ ಸಿಬ್ಬಂದಿ 100 ಜನ ಇದ್ದರು. ಒಟ್ಟು 1,400 ಜನ ಆ ಫ್ಯಾಕ್ಟರಿಯಿಂದ ಜೀವನ ಮಾಡುತ್ತಿದ್ದರು.

1940ರಲ್ಲಿ ಈ ಕಂಪೆನಿಯಲ್ಲಿ ಕೆಲಸಮಾಡತಕ್ಕ ಕೂಲಿಕಾರರೆಲ್ಲ ಸೇರಿ ಒಂದು ಸಂಘವನ್ನು ಸ್ಥಾಪನೆ ಮಾಡಿದರು. 1940ರಿಂದ 1952ರ ವರೆಗೂ ಈಗಿರತಕ್ಕ ವಿದ್ಯಾಮಂತ್ರಿಗಳು ಆ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದರು. 1952ರಲ್ಲಿ ಇವರು ಆಗಿನ ಶಾಸನಸಭೆಯ ಸ್ವೀಕರ್ ಆಗಿದ್ದರು. ಇವರು ಸ್ವೀಕರ್ ಆಗಿ ಇರುವಾಗಲೂ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದುದರಿಂದ ಆ ಸಂಘದವರು ಇವರಲ್ಲಿ ಪದೇ ಪದೇ ಬಂದು ಅವರಿಗೆ ಆಗಬೇಕಾದ ಸಾಕಾರ್ಯಗಳನ್ನು ಪಡೆದುಕೊಳ್ಳುವುದಕ್ಕೆ ಬಹಳ ಕಷ್ಟವಾಯಿತು. ಅನೇಕಸಾರಿ ಕಾರ್ಮಿಕ ಸಂಘದವರು, ಮೀಟಿಂಗ್ ಮಾಡಬೇಕು, ನಮ್ಮ ಕಷ್ಟಸುಖ ಹೇಳಬೇಕು ಹತ್ತು ವರ್ಷದಿಂದ ಮೀಟಿಂಗ್ ಆಗಿಲ್ಲ ನಾವು ಬಹಳ ಕಷ್ಟದಲ್ಲಿದ್ದೇವೆ ಎಂದು ತಮ್ಮ ಅಧ್ಯಕ್ಷರಿಗೆ ತಿಳಿಸಿದರು. 1952ರಲ್ಲಿ ಫ್ಯಾಕ್ಟರಿಯಲ್ಲಿ ಕಾರ್ಮಿಕರ ದುಡಿಮೆಯಿಂದ ಉತ್ಪಾದನೆಯಾದ 14 ಲಕ್ಷ ರೂಪಾಯಿ ಬೆಲೆಬಾಳುವಷ್ಟು ಸ್ಟಾಕ್ ಇತ್ತು. ಕೂಲಿಕಾರರಿಗೆ ಮೂರಾಣೆ, ನಾಲ್ಕಾಣೆ, ಐದಾಣೆ, ಹೀಗೆ ಕಡಮೆ ದರ ಕೂಲಿಯನ್ನು ಕೊಡುತ್ತಿದ್ದರು. ಇಷ್ಟು ಕಡಮೆ ಕೂಲಿಯಿಂದ ಜೀವನ ಮಾಡುವುದಕ್ಕೆ ಸಾಧ್ಯ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ವಿಲ್ಲವೆಂದು ಕಾರ್ಮಿಕ ಸಂಘದ ಅಧ್ಯಕ್ಷರು ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡು ಅವರಿಗೆ ಅನುಕೂಲ ಮಾಡಿಸಬೇಕೆಂದೂ ಕೋರಿ ಅವರಿಗೆ ಅನೇಕ ಕಾಗದಗಳನ್ನು ಬರೆದರು, ನೋಟೀಸ್ ಕೊಟ್ಟರು. ಆದರೂ ಮೀಟಿಂಗ್ ಕರೆಯಲಿಲ್ಲ. ಫ್ಯಾಕ್ಟರಿಯು ಏಳಿಗೆಯಾಗಬೇಕಾಗಿದ್ದರೆ ಕಾರ್ಮಿಕರು ಉಳಿಯಬೇಕು, ಕಾರ್ಮಿಕರು ಉಳಿಯಬೇಕಾದರೆ ಫ್ಯಾಕ್ಟರಿಯು ಉದ್ಧಾರವಾಗಬೇಕು. ಇಷ್ಟಾದರೂ ಸಹ ಕಾರ್ಮಿಕ ಸಂಘದ ಅಧ್ಯಕ್ಷರು ಮೀಟಿಂಗ್ ಕರೆಯದೆ ಇದ್ದುದರಿಂದ ಕಾರ್ಮಿಕರು ತಾವು ಅನುಕೂಲವಾಗಿ ಕೊಳ್ಳುವುದಕ್ಕೋಸ್ಕರ ಅವರೇ ಸ್ವತಃ ನೋಟೀಸ್ ಕೊಟ್ಟು ಒಂದು ಮೀಟಿಂಗ್ ಕರೆದು ಅದರಲ್ಲಿ ಆಗಿನ ಅಧ್ಯಕ್ಷರಮೇಲೆ ಎಲ್ಲರೂ ಒಮ್ಮತದಿಂದ ಅವಿಶ್ವಾಸವನ್ನು ವ್ಯಕ್ತಪಡಿಸಿ ಅವರನ್ನು ಅಧ್ಯಕ್ಷಗಿರಿಯಿಂದ ತೆಗೆದು ಹಾಕಿದರು. ಆಗಿನಿಂದ ಎಂದರೆ, 1952ರಿಂದ ಕಾರ್ಮಿಕರಿಗೆ ತೊಂದರೆ ಪ್ರಾರಂಭವಾಯಿತು. ಆಗ ಸಂಘದ ಅಧ್ಯಕ್ಷರಾಗಿದ್ದವರು ತಮ್ಮನ್ನು ಮತ್ತೆ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕಾರ್ಮಿಕರಿಗೆ ನೋಟೀಸ್ ಕೊಟ್ಟು, ಪುನಃ ಮೀಟಿಂಗ್‌ಮಾಡಲು ಎಲ್ಲರೂ ಸೇರಬೇಕೆಂದು, ಕರೆದರು. ನಿಮ್ಮನ್ನು ಹತ್ತು ವರ್ಷಗಳಿಂದ ಅಧ್ಯಕ್ಷರಾಗಿಟ್ಟುಕೊಂಡಿದ್ದು ನೀವು ನಮಗೆ ಏನೂ ಸಹಾಯಮಾಡದೆ ಇರುವುದರಿಂದ ಮತ್ತೆ ನಿಮ್ಮನ್ನು ಅಧ್ಯಕ್ಷರಾಗಿ ನೇಮಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ತೀರ್ಮಾನ ಮಾಡಿದ್ದೇವೆ, ಅದರ ಪ್ರಕಾರವಾಗಿ ನೀವು ನಮ್ಮ ಸಂಘದ ಅಧ್ಯಕ್ಷರಾಗಿರಕೂಡದು ಎಂದು ಖಡಾಖಂಡಿತವಾಗಿ ಹೇಳಿದ್ದುರಮೇಲೆ ಅಲ್ಲಿಯ ಕಾರ್ಮಿಕರಿಗೆ ತೊಂದರೆ ಪ್ರಾರಂಭವಾಯಿತು. ಒಂದೇಸಾರಿ 1,100 ಜನರನ್ನು ಕೆಲಸದಿಂದ ತೆಗೆದುಬಿಟ್ಟರು. ಕಾರ್ಮಿಕ ಸಂಘದ ಅಧ್ಯಕ್ಷರ ಬದಲಾವಣೆಯಾದ ನಂತರ ಕೂಡಲೇ 14 ಲಕ್ಷ ರೂಪಾಯಿಗಳ ಸ್ಟಾಕ್ ಇರುವಾಗ 1,200 ಜನ ಕೆಲಸಗಾರರನ್ನು ಕೆಲಸವಿಲ್ಲವೆಂದು ಒಂದೇ ದಿವಸ ತೆಗೆದುಹಾಕಿದರು. ಆ ವರ್ಷದಲ್ಲಿ ಫ್ಯಾಕ್ಟರಿಗೆ ಐದು ಲಕ್ಷ ರೂಪಾಯಿಗಳ ನಷ್ಟವಾಯಿತು. ಅಲ್ಲದೆ ಕೆಲಸಗಾರರಿಗೆ ಹಿಂಸೆ ಪ್ರಾರಂಭವಾಯಿತು. ಎಷ್ಟು ಹಿಂಸೆಯಾದರೂ ಅದನ್ನೆಲ್ಲ ಕೆಲಸಗಾರರು ತಡೆದುಕೊಂಡರು. ಆಗ ಕಣ್ಣನ್ ಎಂಬವರನ್ನು ತಮ್ಮ ಸಂಘದ ಅಧ್ಯಕ್ಷರನ್ನಾಗಿ ಮಾಡಿಕೊಂಡು ಹಿಂದ್ ಮಜ್ದೂರ್ ಸಭೆಯ ನೇತೃತ್ವದಲ್ಲಿ ಲೇಬರ್ ಅಸೋಸಿಯೇಷ್ಷನ್ ಮಾಡಿಕೊಂಡು, ಲೇಬರ್ ಟ್ರಿಬ್ಯುನಲ್‌ಗೆ ಹೋಗಿ ಕಷ್ಟಪಟ್ಟು, ಎಲ್ಲ ಮಾಡಿದ ಮೇಲೆ 1954ನೆಯ ಅಕ್ಟೋಬರ್ ತಿಂಗಳಿನಲ್ಲಿ ಒಂದು ಒಪ್ಪಂದಕ್ಕೆ ಬಂದರು. ಆ ರೀತಿ ಒಪ್ಪಂದಕ್ಕೆ ಬಂದಾಗ 1,250 ಜನರನ್ನು ಕೆಲಸಕ್ಕೆ ವಾಪಸು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿ ಅದರಂತೆ ಅವರನ್ನೆಲ್ಲ ಕೆಲಸಕ್ಕೆ ತೆಗೆದುಕೊಂಡರು. ಉಳಿದ ಜನರನ್ನು ತೆಗೆದುಕೊಳ್ಳಲು ಆಗಲಿಲ್ಲ. ಅವರನ್ನೆಲ್ಲ ಮುಂದೆ ಕೆಲಸಖಾಲಿ ಬಿದ್ದಾಗ, ಅನುಕೂಲವಾದಾಗ ತೆಗೆದುಕೊಳ್ಳುತ್ತೇವೆಂದು ಹಾಗೆಯೇ ಬಿಟ್ಟರು. ಆಗ ಕೆಲಸಗಾರರು ಮತ್ತು ಮ್ಯಾನೇಜ್‌ಮೆಂಟಿನವರು, ಇಬ್ಬರೂಕೂಡ ಒಮ್ಮತವಾಗಿ, ಒಗ್ಗಟ್ಟಿನಿಂದ ಕೆಲಸಮಾಡಿದುದರ ಪರಿಣಾಮವಾಗಿ ಫ್ಯಾಕ್ಟರಿಯು ಲಾಭದಾಯಕವಾಗಿ ಕೆಲಸ ಮಾಡಿತು. ಕೆಲಸಗಾರರೂಸಹ ಫ್ಯಾಕ್ಟರಿಯು ಮುಂದೆ ಬರಲಿ ಎಂದು ಮ್ಯಾನೇಜ್‌ಮೆಂಟಿನವರೊಡನೆ ಸಹಕರಿಸಿ ಕೆಲಸಮಾಡಿದ್ದರಿಂದ ನಾಲ್ಕು ಲಕ್ಷ ರೂಪಾಯಿಗಳ ಲಾಭ ಬಂತು. ನಷ್ಟವಾಗುವುದು ಹೋಗಿ, ನಾಲ್ಕು ಲಕ್ಷ ರೂಪಾಯಿ ಲಾಭಬಂದಿತು. ಚೇರ್‌ಮನ್ ರಾದ ಶಂಷುದ್ದೀನ್‌ರವರು ಬಹಳ ನುರಿತವರು, ಅನುಭವಸ್ಥರು, ದಕ್ಷರು. ಅಧ್ಯಕ್ಷರಾಗಿ, ಹಿಂದಿನಿಂದ ಬಹಳ ವರ್ಷ ಕೆಲಸ ಮಾಡಿದ್ದಾರೆ. ಅವರು ಬಹುವರ್ಷ ಸರ್ಕಾರಿ ಕೆಲಸದಲ್ಲಿದ್ದರು. ಡೈರೆಕ್ಟರ್ ಆಫ್ ಸೆರಿಕಲ್‌ಚರ್ ಆಗಿ ಕೆಲಸಮಾಡಿ, ಜಪಾನಿನಲ್ಲಿ ಹೆಚ್ಚಿನ ಅನುಭವ ಪಡೆದುಕೊಂಡು ಬಂದಿದ್ದರು. ರೈವಲ್ ಯೂನಿಯನ್ ಒಂದು ಮಾಡಿಕೊಂಡು ಸರ್ಕಾರದವರು ಅವರು ಕೆಲಸದಿಂದ ನಿವೃತ್ತರಾಗುವುದಕ್ಕೆ ಒಂದು ಪ್ರೆಷರ್ ಹಾಕುವುದಕ್ಕೆ ಶುರು ಮಾಡಿದರು. ಈ ಮಿಲ್ಲಿನಲ್ಲಿ ಕಾಂಗ್ರೆಸ್ಸಿಗೆ ಸಂಬಂಧಪಟ್ಟ 1160 ಮೆಂಬರುಗಳಿರುವ ಇಂಟಕ್‌ಗೆ ಸೇರಿದ ಯೂನಿಯನ್ ಇದೆ. ಈ ಯೂನಿಯನ್ನಿನ ಆಡಳಿತದಲ್ಲಿ ಸರ್ಕಾರ ಕೈಹಾಕಿ, ಶಂಷುದ್ದೀನ್ ಸಾಹೇಬರನ್ನು ಇಕ್ಕಟ್ಟಿನ ಪರಿಸ್ಥಿತಿಗೆ ತರುವುದಕ್ಕೆ ಪ್ರಯತ್ನನಡೆಯುತು. ಇದರಿಂದ ಶಂಷುದ್ದೀನ್ ಸಾಹೇಬರು ಚೇರ್‌ಮನ್ ಆಗಿ ಕೆಲಸ ಮಾಡುವುದು ಬಹಳ ಕಷ್ಟವಾಯಿತು. ಅದೂ ಅಲ್ಲದೆ ಇದು ಪ್ರೈವೇಟ್ ಲಿಮಿಟೆಡ್ ಕಂಪೆನಿ. ಅಂಟಿಕರಪ್ಷನ್ ಡಿಪಾರ್ಟ್‌ಮೆಂಟಿನವರಿಗೆ ಇವರ ಮೇಲೆ ವಿಚಾರಣೆ ಮಾಡುವುದಕ್ಕೆ ಯಾವ ಹಕ್ಕೂ ಇಲ್ಲ. ಇವರ ಮೇಲೆ ವಿಚಾರಣೆ ಮಾಡುವುದಕ್ಕೆ ಪೋಲೀಸ್ ಡಿಪಾರ್ಟ್‌ಮೆಂಟಿನ ಆಫೀಸರನ್ನು ಸರ್ಕಾರದವರು ನೇಮಕಮಾಡಿದರು. ವಿಚಾರಣೆ ಎಷ್ಟುದೂರ ಹೋಯಿತು ಎಂದರೆ, ಶಂಷುದ್ದೀನರಿಗೆ ಬೇಜಾರಾಯಿತು. ಅವರಿಗೆ ಹಿಂಸೆ ಕೊಡುವುದು ಶುರುವಾಯಿತು. ಕೊನೆಗೆ ಒತ್ತಾಯಮಾಡಿ ಅವರ ರಾಜೀನಾಮೆಯನ್ನು ಪಡೆದುಕೊಂಡರೆಂದು ಕೇಳಿದ್ದೇನೆ. ಕೆಲಸಗಾರರಿಗೂ ಅದೇ ಭಾವನೆ ಇದೆ. ಇವರ ಕಾಲದಲ್ಲಿ ಕೆಲಸಗಾರರಿಗೂ, ಮೇನೇಜರ್ ಅವರಿಗೂ, ಸರ್ಕಾರಕ್ಕೂ ಒಳ್ಳೆಯ ಸಹಕಾರವಿತ್ತು. ಈ ಸಭೆ ಹಿಂದೆ ಇನ್ನೊಂದು ಬಿಲ್ಡಿಂಗ್‌ನಲ್ಲಿ ಸೇರಿದ್ದಾಗ ಈ ಮೇನೇಜರ್ ಅವರು ಒಂದು ಪ್ರೋರಣೆಗೆ ಒಳಗಾಗಿದ್ದಾರೆ ಎಂದು ವಿರೋಧ ಪಕ್ಷದವರು ಪ್ರಶ್ನೆ ಮಾಡಿದಾಗ, ಈ ಸಭೆಯ ಸದಸ್ಯರಾಗಿದ್ದುಂಥ, ಈಗ ನಮ್ಮ ವಿದ್ಯಾಮಂತ್ರಿಗಳಾಗಿರುವರು: ನೇನೇಜರು ಬಹಳ ಎಫಿಷಿಯಂಟ್ ಆಫೀಸರು, ದಕ್ಷರು. ಕೆಟ್ಟದೇನನ್ನೂ ಮಾಡಿಲ್ಲ, ಮಿಲ್ ಚೆನ್ನಾಗಿ ನಡೆಯುತ್ತಾ ಇದೆ. ನೀವು ವಿರೋಧ ಪಕ್ಷದವರು ಹೇಳುತ್ತಿರುವುದು ಸರಿಯಲ್ಲ. ಬೇಕಾದಷ್ಟು ಅನುಕೂಲ ಕೆಲಸಗಾರರಿಗೆ ಮಾಡಿಕೊಟ್ಟಿದ್ದಾರೆ, ಎಂದು ಹೇಳಿದರು, ಅವರ ಈ ಸ್ಟೇಟ್‌ಮೆಂಟ್ ಪ್ರೊಸೀಡಿಂಗ್ಸ್‌ನಲ್ಲಿ ಪ್ರಿಂಟ್ ಆಗಿದೆ. ಸರ್ಕಾರದ ಕೈವಾಡದಿಂದ ಬೇರೆ ಮೇನೇಜರು ಬರುವುದಕ್ಕೆ ಕಾರಣವಾಗಿದೆ. ಅನುಭವಸ್ಥರಾದವರನ್ನು ಚೇರ್‌ಮನ್‌ರಾಗಿ ಸರ್ಕಾರ ನೇಮಕ ಮಾಡದೆ ಇರುವುದರಿಂದ ಇವತ್ತು ದೇಶದ ಸಂಪತ್ತು ನಷ್ಟವಾಗಿ, ಕೂಲಿಗಾರರ ಜೀವನ ಹಾಳಾಗುವುದಕ್ಕೆ ಸರ್ಕಾರದವರು ಜವಾಬ್ದಾರರಾಗಿದ್ದಾರೆ. ಶಂಷುದ್ದೀನ್‌ರವರನ್ನು ನಿವೃತ್ತಿ ಮಾಡುವುದಕ್ಕೆ, ಹೊರಗೆ ಕಳುಹಿಸುವುದಕ್ಕೆ ಇಫ್ಲೂಯನ್ಸ್ ಬಂದಿತು. ಅವರು ಹೋಗಲಿಲ್ಲ. ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳಿದರು. ಅನಂತರ ಸೆಕ್ರೆಟರಿಗೆ ಹಿಂಸೆ ಕೊಟ್ಟರು. ಅವರಿಗೆ ಒಬ್ಬರು ಒಂದು ಎಕ್ಕಡದಲ್ಲಿ ಹೊಡೆದರು. ಪೋಲಿಸಿಗೆ ಕಂಪ್ಲೇಂಟ್ ಕೊಟ್ಟರೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಇಂಥ ವ್ಯವಸ್ಥೆ ಇರತಕ್ಕ ಸರ್ಕಾರ ವಿದ್ದರೆ, ಜನತೆ ಹೇಗೆ ಜೀವನ ಮಾಡಬೇಕು? ಅಂಥ ದೊಡ್ಡ ಫ್ಯಾಕ್ಟರಿಯಲ್ಲಿದ್ದ ಶ್ರೀ ಸೂರ್ಯನಾರಾಯಣರಾಯರು ಒಂದು ಕಂಪ್ಲೇಂಟ್ ಕೊಟ್ಟರೆ, ಪೋಲೀಸು

ಇನ್‌ಸ್ಪೆಕ್ಟರು ವಿಚಾರಣೆ ಕೂಡ ಮಾಡಲಿಲ್ಲ. ಯಾರು ಹೊಡೆದವರು ಎಂದು ವಿಚಾರಮಾಡಿ ಆಕ್ಷನ್ ತೆಗೆದು ಕೊಳ್ಳದಿದ್ದರೆ, ಫ್ಯಾಕ್ಟರಿಯ ಕೆಲಸವನ್ನು ದಕ್ಷತೆಯಿಂದ ನಡೆಸುವುದಕ್ಕೆ ಸಾಧ್ಯವೇ? ಇದನ್ನು ಯೋಚನೆ ಮಾಡಬೇಕು. ದೂರು ಮುಖ್ಯ ಮಂತ್ರಿಗಳ ಹತ್ತಿರ ಬಂದಿತು. ದೊಡ್ಡ ಸಂಸ್ಥೆಯ ಆಡಳಿತವನ್ನು ನಡೆಸುತ್ತಾ ಇರತಕ್ಕವರಿಗೆ, ಅವರು ಬಿಟ್ಟುಹೋಗಲಿ, ಬೇರೆ ಯಾರನ್ನಾದರೂ ತಮಗೆ ಬೇಕಾದವರನ್ನು ನೇಮಿಸಿಕೊಳ್ಳೋಣ, ಮಿಲ್ಲನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳೋಣವೆಂದು, ಎಕ್ಕಡದಲ್ಲಿ ಹೊಡೆದುದು ಒಂದು ಪ್ರಯತ್ನ. ಮುಖ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡದಿದ್ದರೆ ಅತ್ತಿನ ದಿವನ ಬಹಳ ಅನಾಹುತಗಳಾಗುತ್ತಿದ್ದವು. ಮುಖ್ಯಮಂತ್ರಿಗಳು ಒಂದು ನಿಮಿಷವೂ ತಡಮಾಡದೆ ಐ.ಜಿ.ಪಿ. ಯವರಿಗೆ ತಕ್ಷಣ ಫೋನ್ ಮಾಡಿದರು. ಅವರಿಗೂ ಸಂಕಟವಾಯಿತು. ಸತ್ಯಾಂಶ ಅವರಿಗೂ ಗೊತ್ತಾಯಿತು. ಸರಕಾರಕ್ಕೂ ಗೊತ್ತಾಯಿತು. ಚೀಫ್ ಮಿನಿಸ್ಟರವರಿಗೆ ಫೋನ್ ಮಾಡಿದಮೇಲೆ ಅವರಿಗೆ ಸ್ವಲ್ಪ ಸಹಾಯ ದೊರೆಯಿತು. ಈ ಕಂಪೆನಿಯ ವಿಚಾರದಲ್ಲಿ ಚೀಫ್ ಮಿನಿಸ್ಟರು ಒಂದು ದಿವಸವೂ ಇಂಟರ್‌ಫಿಯರ್ ಆಗಿಲ್ಲ, ಕ್ಷೇಹಾಕಿಲ್ಲ ಎಂದು ಖಡಾಖಂಡಿತವಾಗಿ ನಾನು ಹೇಳುತ್ತೇನೆ. ಮಿಲ್ಲಿಗೇಕೆ ರಾಜಕೀಯ ಎಂದು ಅವರು ಮಿಲ್ಲಿನ ವಿಷಯಗಳಲ್ಲಿ ಯಾವಾಗಲೂ ಪ್ರವೇಶ ಮಾಡಿಲ್ಲ, ಮಿಲ್ಲಿನ ಜನಗಳಿಗೆ ನ್ಯಾಯ ದೊರಕಲಿ ಎಂಬುದೊಂದೇ ಆಶೆಯಿತ್ತು. ಹಾಗಾದರೆ ಯಾರು ಇಂಟರ್‌ಫಿಯರ್ ಮಾಡಿದರು? ಈ ಥೇರ್‌ಮನ್ನರು ಹೊರಟು ಹೋದಮೇಲೆ, ಶ್ರೀ ಕೆ. ತಿಪ್ಪೇರುದ್ರಯ್ಯನವರನ್ನು ಥೇರ್‌ಮನ್ನರಾಗಿ ನೇಮಕ ಮಾಡಿದರು. ಶ್ರೀ ತಿಪ್ಪೇರುದ್ರಯ್ಯನವರು ಸತ್ಯವಾದಿಗಳು, ಸತ್ಯಸಂಧರು, ಯಾರು ಅನ್ಯಾಯ ನುಡಿದರೂ ಕಿವಿ ಕೊಡುವವರಲ್ಲ. ಅವರಿಗೆ ಈಗ ಅಧಿಕಾರವಿದ್ದಿದ್ದರೆ ಏನೇನು ಆಗುತ್ತಿತ್ತೋ! ರಾಜಿನಾಮೆ ಕೊಟ್ಟುಬಿಟ್ಟರು. ಮಂತ್ರಿಗಳೇ ಅನ್ಯಾಯ ಮಾಡಲಿ, ಪುಟ್ಟರಾಮಯ್ಯನವರೇ ಮಾಡಲಿ, ಪ್ರಪಂಚದಲ್ಲಿ ಯಾರೇ ಅನ್ಯಾಯ ಮಾಡಿದರೂ ಅವರ ಮೇಲೆ ಉಗ್ರಕಾರ್ಯಕ್ರಮ ತೆಗೆದು ಕೊಳ್ಳತಕ್ಕಂಥ ಅಧಿಕಾರಿ ಇವರು. ಶ್ರೀ ಶಂಷುದ್ದೀನ್ ರವರು ಹೋದಾಗ, ಅವರು ಇಲಾಖೆಯಲ್ಲಿ ಮೊದಲಿನಿಂದಲೂ ನುರಿತವರು, ಅನುಭವಸ್ಥರು, ಅವರನ್ನು ಥೇರ್‌ಮನ್ ಕೆಲಸದಿಂದ ತಪ್ಪಿಸಿದ್ದು ಸರಿಯಲ್ಲ, ಹಾಗೆ ಮಾಡಬಾರದಾಗಿತ್ತು ಎಂದು ಅಂದುಕೊಂಡೆವು. ಆದರೆ ತಿಪ್ಪೇರುದ್ರಯ್ಯನವರಂಥ ಸತ್ಯವಂತರೂ, ಅನುಭವಸ್ಥರೂ, ಬುದ್ಧಿವಂತರೂ ಆದ ಐ.ಎ.ಎಸ್. ಆಫೀಸರನ್ನು ಅವರ ಸ್ಥಾನಕ್ಕೆ ನೇಮಕಮಾಡಿದಾಗ, ಹೋಗಲಿ, ಇವರ ಕಾಲದಲ್ಲಿ ಒಂದು ನ್ಯಾಯವಾದ ರೀತಿಯಲ್ಲಿ ಆಡಳಿತ ನಡೆಯುತ್ತದೆ, ಎಂದು ಅಂದುಕೊಂಡೆವು. ಶ್ರೀ ತಿಪ್ಪೇರುದ್ರಯ್ಯನವರ ಹತ್ತಿರ ರೈವಲ್ ಯೂನಿಯನ್‌ನವರು ಹೋಗಿ ನಮ್ಮ ಮಾತು ಕೇಳದೆ ಹೋದರೆ ನೀವು ಕೆಲಸ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಅವರಿಗೂ ಕೆಲಸ ಹೊಸದು. ಇವರು ಹೇಳಿದಹಾಗೆ ಕೇಳಿ ವಿನಾಕಾರಣ ಲಾಕ್‌ಔಟ್ ಡಿಕ್ಲೇರ್ ಮಾಡಿದರು. ಇದರಲ್ಲಿ ರೈವಲ್ ಯೂನಿಯನ್ ಅವರ ಉದ್ದೇಶವೇನೆಂದರೆ ತಮಗಾಗದ ವರಿಗೆ ಕೆಲಸವಿಲ್ಲದ ಹಾಗೆ ಮಾಡಬೇಕೆಂದು ಲಾಕ್‌ಔಟ್ ಮಾಡಿಸಿದರು. ಐ. ಎನ್. ಟಿ. ಯು. ಸಿ. ಎಂಬುದು ಕಾಂಗ್ರೆಸ್ ಸಂಸ್ಥೆಗೆ ಸಂಬಂಧಪಟ್ಟದ್ದು. ಇದಲ್ಲದೆ ಸರ್ಕಾರದ ಕಡೆಗೆ ಸೇರಿದ ಬೇರೊಂದು ಯೂನಿಯನ್ ಇದೆ. ಅದನ್ನು ಸರ್ಕಾರದವರು ತಯಾರುಮಾಡಿದ್ದಾರೆ. ಐ.ಎನ್.ಟಿ.ಯು.ಸಿ. ವ್ಯವಸ್ಥೆಯಿಂದಿರುವ ಸಂಸ್ಥೆ, ಸಾವಿರಾರು ಜನ ಸೇರಿ ಕೆಲಸ ಮಾಡುತ್ತಿದ್ದ ಸಂಸ್ಥೆ. ಇನ್ನೊಂದು ಬೇರೆ ರೀತಿಯದು. ಅಲ್ಲಿನ ಕೆಲಸಗಾರರನ್ನು ಆ ಇನ್ನೊಂದು ಸಂಸ್ಥೆಗೂ ಸೇರಿಸಲು ಪ್ರಯತ್ನ ಮಾಡಿದರು. ಅದೇನೂ ನಾವು ಮಾಡಿದುದಲ್ಲ. ಆ ಕಾಲದಲ್ಲಿ ಕೆಲವು ಕೆಲಸಗಾರರನ್ನು ರಿಚ್ರೆಂಚ್‌ಮಾಡಿಸಿದರು ಮತ್ತೆ ಕೆಲವರನ್ನು ಡಿಸ್‌ಮಿಸ್ ಮಾಡಿಸಿದರು. ಯಾರು ಡಿಸ್‌ಮಿಸ್ ಮಾಡಿಸಿದರೋ ಅವರೇ ಈಗ ಆ ಕೆಲಸಗಾರರಿಗೆ ಅನ್ಯಾಯವಾಗಿದೆ, ಸಹಾಯ ಮಾಡಬೇಕು ಎಂದು ಪ್ರಯತ್ನ ಮಾಡಿದರು. 53 ಜನರನ್ನು ಸೇರಿಸಿ ಆ ಯೂನಿಯನ್ ಮಾಡಿದ್ದಾರೆ. ಅದರ ಹೆಸರು ಗೊತ್ತಿಲ್ಲ, ಅಂತೂ 53 ಜನರ ಯೂನಿಯನ್. ಲಾಕ್‌ಔಟ್ ಆದ ಮೂರು ದಿನವಾದರೂ ಕೆಲಸಗಾರರೂ ಇಲ್ಲ ಕೆಲಸವೂ ಇಲ್ಲ ಆ ಕಾರ್ಖಾನೆಯಲ್ಲಿ. ಶ್ರೀಮಾನ್ ತಿಪ್ಪೇರುದ್ರಯ್ಯನವರು ನೋಡಿದರು, ಅವರಿಗೆ ವಿಷಯ ಸರಿಯಾಗಿ ಗೊತ್ತಾಯಿತು. ಇವರು ಏನು ಮಾಡುತ್ತಿದ್ದಾರೆಂಬುದನ್ನು ತಿಳಿದುಕೊಂಡ ಮೇಲೆ ಇವರ ಮಾತನ್ನು ಕೇಳುವುದನ್ನು ನಿಲ್ಲಿಸಿದರು. ಅವರು ಹೇಳಿದಹಾಗೆ ಕೇಳಬೇಕು, ಅವರು ಹೇಳಿದವರನ್ನು ಡಿಸ್‌ಮಿಸ್ ಮಾಡಬೇಕು, ಇಲ್ಲದಿದ್ದರೆ ಕೈಗಾರಿಕೆ ಮಂತ್ರಿಗಳಿಂದ ಒತ್ತಾಯ ಬರುತ್ತಿತ್ತು. ಇದನ್ನೆಲ್ಲಾ ನೋಡಿ ಶ್ರೀಮಾನ್ ತಿಪ್ಪೇರುದ್ರಯ್ಯನವರಿಗೆ ಬೇಸರವಾಯಿತು. ನನ್ನ ಆಡಳಿತದಲ್ಲಿ ಮಂತ್ರಿಗಳೇಕೆ ಕೈಹಾಕಬೇಕೆಂಬ ದೃಷ್ಟಿಯಿಂದ ರಾಜೀನಾಮೆ ಕೊಟ್ಟರು. ಇಂಥ ಸತ್ಯಸಂಧರು ರಾಜೀನಾಮೆ ಕೊಡಬೇಕಾದರೆ ಕಾರಣವೇನಿರಬಹುದು? ಅವರ ಕೆಲಸದಲ್ಲಿ ಮಂತ್ರಿಗಳೇಕೆ ಕೈಹಾಕಬೇಕು? ಮಿಲ್ಲು ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕಾದರೆ ಆಗ ಸರ್ಕಾರ ಕೈಹಾಕಬಹುದು. ಕೆಲಸ ಮಾಡುತ್ತಿರುವ ಚೇರ್ಮನ್‌ರಿಗೆ ಏಕೆ ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳಬೇಕು? ಕೈಗಾರಿಕೆ ಮಂತ್ರಿಗಳಿಗೂ ಅವರ ಕೆಲಸಕ್ಕೂ ಏನು ಸಂಬಂಧ? ಈ ಹೊತ್ತು ಸರ್ಕಾರದವರು ತಾವೇನೂ ಕೈಹಾಕಲಿಲ್ಲವೆಂದು ಹೇಳಬಹುದು. ಆದರೆ ನಿಜಾಂಶ ಬೇರೆ. ಇಂಥ ನಿಸ್ಪೃಹ ಅಧಿಕಾರಿ ರಾಜೀನಾಮೆ ಕೊಡುವ ಹಾಗೆ ಮಾಡಿ ಅವರನ್ನು ಹೊರಗೆ ಕಳುಹಿಸಿರುವುದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಆಗ 50 ಸಾವಿರ ಪೌಂಡು ಉತ್ಪತ್ತಿಯಾಗುತ್ತಿದ್ದುದು ಈಗ ಅವರು ಹೋದಮೇಲೆ 20 ಸಾವಿರಕ್ಕೆ ಇಳಿದಿದೆ. ಅಲ್ಲಿಂದ ಅವರನ್ನು ತೆಗೆದುಹಾಕಿ ಆ ಜಾಗಕ್ಕೆ ಈ ಹೊತ್ತು ಒಬ್ಬರು ಭಾರಿ ಬಟ್ಟೆಯ ವ್ಯಾಪಾರ ಮಾಡುವ ಶ್ರೀಮಂತರನ್ನು ನೇಮಕ ಮಾಡಿದ್ದಾರೆ. ಅವರು ಇವರಿಗೆ ಹಣ ಕೊಡಬಹುದೇ ವಿನಾ ಅವರಿಗೆ ಹಣದ ಅಗತ್ಯವಿಲ್ಲ.

ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ನಮಗೇನು ಕೊಡುವುದು ಎಂದು ಹೇಳುತ್ತೀರಾ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕಾಂಗ್ರೆಸ್ ಸಂಸ್ಥೆಗೆ ಹಣವನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಕೊಡಲಿ, ಹಣವಿದ್ದರೆ ಕಾಂಗ್ರೆಸ್ ಸಂಸ್ಥೆಗೆ ಕೊಡುತ್ತಾರೆ, ಪಿ.ಎಸ್.ಪಿ. ಕೊಡುತ್ತಾರೆ, ಕಮ್ಯುನಿಸ್ಟ್ ಪಾರ್ಟಿಗೆ ಕೊಡುತ್ತಾರೆ ಅಥವ ಬೇರೆ ಸಂಸ್ಥೆಗಳಿಗೆ ಕೊಡುತ್ತಾರೆ. ಅವರ ಹಣವನ್ನು ಅವರು ಯಾರಿಗೆ ಬೇಕಾದರೂ ಕೊಡುವ ಹಕ್ಕು ಅಫರಿಗಿದೆ. ಶ್ರೀ ಜೀನಾಬಾಯ್ ದೇವೀದಾಸ್ ಅವರು ಸಂಬಳದಿಂದೇನೂ ಜೀವನ ಮಾಡಬೇಕಾಗಿಲ್ಲ. ಆದರೆ ಅವರಿಗೆ ಕೆಲಸ ಗೊತ್ತಿಲ್ಲ. ಅವರು ಏನು ಆಡಳಿತ ನಡೆಸಿದ್ದಾರೆ? ತಿಪ್ಪೇರುದ್ರಯ್ಯನವರ ರಾಜೀನಾಮೆ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಯನ್ನೊಪ್ಪಿ ಜೀನಾಬಾಯಿ ದೇವೀದಾಸ್‌ರವರನ್ನು ಚೇರ್ಮನ್‌ರಾಗಿ ನೇಮಕ ಮಾಡಿದರೆಂದು ಗೊತ್ತಾದಾಗ ನಮಗೆ 'ಷಾಕ್' ಆಯಿತು. ಮಿಲ್ಲಿಗೆ ಹಣವನ್ನು ಕೊಡುತ್ತಿದ್ದವರೂ ಕೂಡ ಸರ್ಕಾರದ ಪ್ರವೇಶದಿಂದ ಹಿಂದೆ ಹೋಗಿದ್ದಾರೆ. ಈಗ ಬಿಕ್ಕೂಬಾಯ್ ಅವರು ಕೂಡ ಕೊಡುತ್ತಿಲ್ಲ. ಬ್ಯಾಂಕಿಗೆ ಸರ್ಕಾರ ಕೊಟ್ಟಿರುವ ಜಾಮೀನನ್ನೂ ತೆಗೆಯುತ್ತೇವೆಂದು ಹೆದರಿಸಿದರು. ಅಲ್ಲ ಸರಿಯಾಗಿ ಕೆಲಸ ಮಾಡಲು ಏನು ತೊಂದರೆ ಕೊಡಬಹುದೋ ಅಷ್ಟನ್ನೂ ಕೊಟ್ಟರು. ಮಂತ್ರಿಗಳು ಈ ಹೊತ್ತು ಸರ್ಕಾರದಲ್ಲಿರಬಹುದು, ಆದರೆ ಇವರೇ ಯಾವಾಗಲೂ ಅಲ್ಲಿರಲು ಸಾಧ್ಯವೆ? ಇರುವ ಎರಡು ದಿವಸದಲ್ಲಿ ಕೆಲಸಗಾರರಿಗೆ ಹಿಂಸೆ ಕೊಡುವುದೆ? ಸತ್ಯಸಂಧರಾದ ಅಧಿಕಾರಿ ರಾಜೀನಾಮೆ ಕೊಡುವಹಾಗೆ ಮಾಡಿದ್ದಾರೆ. ಆಡಳಿತದಲ್ಲಿ ಏನಿದೆ ಎನ್ನುವುದು ನಮಗೆ ಗೊತ್ತಿದೆ. ಇದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಕಾರ್ಖಾನೆಗಾದ ಆ ನಷ್ಟವನ್ನು ಯಾರು ಕೊಡುವವರು? ಸರ್ಕಾರ ಕೊಡಬೇಕೆ, ಷೇರುಧಾರರು ಕೊಡಬೇಕೆ, ಕೆಲಸಗಾರರು ಕೊಡಬೇಕೆ ಎನ್ನುವುದನ್ನು ತಿರ್ಮಾನ ಮಾಡುವುದಕ್ಕೆ ಒಂದು ಸಮಿತಿ ಬೇಕು. ಈ ಕಾರ್ಖಾನೆ ಮುಳುಗಿಹೋದರೆ ಲಕ್ಷಾಂತರ ಜನರಿಗೆ ಅನ್ಯಾಯವಾಗುತ್ತದೆ, ಒಂದು ಕೈಗಾರಿಕೆ ಹೋಗುತ್ತದೆ. ಇದರಿಂದ ದೇಶದ ಜನರ ಜೀವನಕ್ಕೆ ಕುಂದು ಬರುತ್ತದೆ. ಇಂಥ ಪರಿಸ್ಥಿತಿ ಇರುವಾಗ ಈ ಸರ್ಕಾರ ನಿಜವಾಗಿ ನಾವು ಪ್ರವೇಶ ಮಾಡಿಲ್ಲವೆಂದು ಹೇಳುವುದಾದರೆ, ಅಥವ ನಾನು ಹೇಳುವುದೇ ಸರಿಯಲ್ಲವೆಂದು ಹೇಳುವುದಾದರೆ, ಒಬ್ಬ ನ್ಯಾಯಾಧೀಶರನ್ನು, ನಮ್ಮ ಸಂಸ್ಥಾನದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಕರೆದು ಅವರ ತೀರ್ಮಾನಕ್ಕೆ ಈ ವಿಷಯವನ್ನು ಒಪ್ಪಿಸಲಿ. ಸರ್ಕಾರ 'ನಮ್ಮಲ್ಲಿ ಅಧಿಕಾರವಿದೆ, ಇದನ್ನು ಈ ರೀತಿ ವಿಚಾರಣೆ ಮಾಡುವುದಿಲ್ಲ' ಎಂದು ಹೇಳಬಹುದು. ಆದರೆ ಎಷ್ಟುದಿವಸ ಅವರು ಹೀಗೆ ಹೇಳುವುದಕ್ಕಾಗುತ್ತದೆ? ನಾವು ಎಷ್ಟು ದಿವಸ ಹೀಗೆ ಕೇಳಿಕೊಂಡಿರಬಹುದು? ನಿಜವಾಗಿಯೂ ಅವರು ನಿಸ್ಪೃಹರೆಂದು ತೋರಿಸಬೇಕೆಂದರೆ, ನಿಜವಾಗಿಯೂ ತಿಪ್ಪೇರುದ್ರಯ್ಯನವರಿಗೆ ಏನೂ ಮಾಡಿಲ್ಲ, ಅವರೇ ರಾಜೀನಾಮೆ ಕೊಟ್ಟರು, ಸರ್ಕಾರ ಕೈಹಾಕಿಲ್ಲ ಎಂದು ತೋರಿಸಬೇಕಾದರೆ, ಒಂದು ವಿಚಾರಣಾ ಸಮಿತಿಯನ್ನು ಸರ್ಕಾರ ನೇಮಕ ಮಾಡಬೇಕು. ಹೀಗೆ ಇಂಥಾ ಸಂದರ್ಭಗಳಲ್ಲಿ ಇತರ ಎಲ್ಲ ಸರ್ಕಾರಗಳೂ ಮಾಡುತ್ತಿವೆ. ಆದರೆ ಮೈಸೂರು ಸರ್ಕಾರ ಈ ಹೊತ್ತಿನವರೆಗೆ ಹಾಗೆ ಮಾಡಿಲ್ಲ. ಕೇಂದ್ರ ಸರ್ಕಾರ ಮಾಡಿದೆ. ಅನೇಕ ಸಂದರ್ಭಗಳಲ್ಲಿ ನ್ಯಾಯಾಧೀಶರು ವಿಚಾರಣೆ ನಡೆಸಲು ಸಮಿತಿಯನ್ನು ನೇಮಕ ಮಾಡಿದೆ. ಆದರೆ ಮೈಸೂರು ಸರ್ಕಾರ ಯಾವಾಗಲೂ ಇದಕ್ಕೆ ಕೈಹಾಕಿಲ್ಲ. ಇವರು ನಮ್ಮದೇ ಈ ಸರ್ಕಾರ ಎಂದು ತಿಳಿದುಕೊಂಡಿದ್ದಾರೆ. ಇಷ್ಟೆಲ್ಲ ಅನ್ಯಾಯವಾಗಿದೆ, ಕೂಲಿಗಾರರಿಗೆ ಇಷ್ಟೆಲ್ಲ ತೊಂದರೆಯಾಗಿದೆ; ಕೆಲಸಗಾರರು ಕಾರ್ಖಾನೆಗೆ ಹೋಗುವ ಹಾಗಿಲ್ಲ; ಬಾಗಿಲನಲ್ಲಿ ಲಬ್ಬೆಗಳನ್ನು ಕೂಡಿಸಿದ್ದಾರೆ. ಮೂರಾಣೆ ನಾಲ್ಕಾಣೆ ಕೂಲಿ ತೆಗೆದುಕೊಳ್ಳುವ ಕೆಲಸಗಾರರಿಂದ ಹತ್ತು ರೂಪಾಯಿ ನಾಲಕ್ಕೆ ನಾಲ್ಕಾಣೆ ಎಂಟಾಣೆ ಬಡ್ತಿ ತೆಗೆದುಕೊಳ್ಳುವವರನ್ನು ಕೂಡಿಸಿದ್ದಾರೆ ಕಾರ್ಖಾನೆಯ ಬಾಗಿಲಿನಲ್ಲಿ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಯಾರು ಕೂಡಿಸಿದ್ದಾರೆ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸರ್ಕಾರದ ಕಡೆಯವರು. ಕೆಲಸಗಾರರಿಗೆ ಹಿಂಸೆ ಕೊಡಬೇಕೆಂದು ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ನಾನು ಹೇಳುತ್ತಿರುವುದು ಸುಳ್ಳು ಎಂದರೆ, ಯಾರಾದರೂ ವಿಚಾರಣೆ ಮಾಡಲಿ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಇಲಾಖೆಯ ಮಂತ್ರಿಗಳು).—ಅಗತ್ಯವಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಗತ್ಯವಿಲ್ಲವೆಂದು ನೀವು ಹೇಳಬಹುದು. ವಿಚಾರಣೆಗೆ ಅಗತ್ಯವಿಲ್ಲ ಎಂದರೆ ನ್ಯಾಯ ದೊರಕುವುದು ಹೇಗೆ?

3 P.M.

ಅಧ್ಯಕ್ಷರು.—ನೀವು ಕೇಳುವುದು ಕೇಳಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಆದ್ದರಿಂದ ಇದನ್ನು ಒತ್ತಾಯ ಮಾಡುತ್ತೇನೆ. ಒಂದು ನ್ಯಾಯ ಇದೆ. ತಿಪ್ಪೇರುದ್ರಯ್ಯನವರಿಗೆ ಹಿಂಸೆ ಮಾಡಿ ರಾಜೀನಾಮೆ ಕೊಡಿಸಲಿಲ್ಲ ಎಂದು ನಿಜವಾಗಿಯೂ ವಿಚಾರ ಇದ್ದರೆ, ಅದು ಹೊರಗಡೆ ಬರಲೇಬೇಕು. ಸದಸ್ಯರು ಎಲ್ಲರೂ ಬರಲಿ; ನಾಳೆ ಬೆಳಿಗ್ಗೆ ನನ್ನ ಖರ್ಚಿನಲ್ಲಿ ಕರೆದುಕೊಂಡು ಹೋಗುತ್ತೇನೆ. ಬಸ್ಸಿನಲ್ಲಿ ಕುಳಿತುಕೊಂಡು ಹೋಗಿ ಅವರು ಏನು ಮಾಡಿದ್ದಾರೆ ಎಂಬುದನ್ನು ಸದಸ್ಯರೇ ನೋಡಲಿ, ಶಿಕ್ಷೆ ಮಾಡಲಿ. ಒಪ್ಪಿಕೊಳ್ಳುತ್ತೇನೆ. ನಿಜವಾಗಿಯೂ ನೀವು ಮಾಡಿರುವುದು ಸರಿಯಲ್ಲ ಎಂದು ಹೇಳುತ್ತಾ ಇದ್ದೇನೆ. ಸರಿ ಎಂದು ಹೇಳುವುದಾದರೆ ಇದನ್ನು ಮಾಡಿಯೇ ತೀರಬೇಕು. ಇಲ್ಲದೇ ಇದ್ದರೆ ಒಂದಲ್ಲ ಒಂದು ದಿವಸ ಮುಂದೆ ವಿಚಾರಣೆ ನಡೆಯದೇ ಇರುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳುತ್ತೇನೆ.

Mr. SPEAKER.—The House will now rise and meet after half an hour.

The House adjourned for recess at Two Minutes past Three of the Clock and re-assembled at Thirty Minutes past Three of the Clock.

[SRI J. H. SHAMSUDDIN in the Chair.]

*ಶ್ರೀ ಎ. ವಿ. ನರಸಿಂಹರೆಡ್ಡಿ.—ಮಾನ್ಯ ಸಭಾಪತಿಗಳೇ, ನನ್ನ ಮಾನ್ಯ ಮಿತ್ರರಾದಂಥ ಶ್ರೀಮಾನ್ ಪುಟ್ಟರಾಮಯ್ಯನವರು ಮಾನ್ಯ ಸಭೆಯಮುಂದೆ ತಂದಿರತಕ್ಕಂಥ ನಿರ್ಣಯದ ವಿಷಯದಲ್ಲಿ ಹೇಳಿದ ಎಲ್ಲ ಅಂಶಗಳನ್ನೂ ಕೇಳಿದೆ. ಎಲ್ಲಾ ವಿಷಯದಲ್ಲೂ ಅವರ ವಾಕ್ ಸರಣಿ ಯಾವ ರೀತಿಯಾಗಿ ಇರುತ್ತದೆಯೋ ಅದೇ ರೀತಿಯಲ್ಲಿ ಈ ನಿರ್ಣಯದ ವಿಷಯದಲ್ಲೂ ಮಾತನಾಡಿದ್ದಾರೆ. ನಾನು ಈ ಚೆನ್ನಪಟ್ಟಣ ಸ್ವದೇಸಿ ಸಿಲ್ಕ್ ಕಾರ್ಖಾನೆಯ ಕೆಲಸಗಾರರ ಮತ್ತು ಅವರ ಅಧ್ಯಕ್ಷರಾಗಿದ ತಿಪ್ಪೇರುದ್ರಯ್ಯನವರ ಬಗ್ಗೆ ಏನು ಅಂಶಗಳನ್ನು ತಿಳಿಸಬೇಕೆಂದು ಬಯಸುತ್ತೇನೆ ಎಂದರೆ, ಅವರು ಮಾತನಾಡಿದ ಎಲ್ಲಾ ವಿಷಯಗಳನ್ನೂ ಕೇಳಿದಾಗ ಅವರು ಶ್ರೇಷ್ಠ ನ್ಯಾಯಾಧೀಶರು ಈ ವಿಚಾರಣೆಯನ್ನು ನಡೆಸುವಂಥ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಸೂಚನೆ ಮಾಡಿದಾಗ ಅಷ್ಟರ ಮಟ್ಟಿನ ಲೋಪದೋಷಗಳು ಏನನ್ನು ಹೇಳುತ್ತಾರೆ ಎಂದು ನಾನು ಬಹಳ ಕಾತುರತೆ

ಯಿಂದ ಕೇಳಲು ಎದುರು ನೋಡಿದೆ. ಅಂಥ ಅಂಶಗಳನ್ನು ಅವರು ಹೇಳಿದ್ದು ನನಗೆ ಏನೂ ಕಾಣಲಿಲ್ಲ. ಒಂದೇ ಒಂದು ಮಾತು ಅವರು ಹೇಳಿದ್ದು, ಅಲ್ಲ ಕೆಲಸಗಾರರ ಒಂದು ಸಂಘ ಇತ್ತು. ಈಗಿನ ವಿದ್ಯಾಮಂತ್ರಿಗಳು ಆ ಸಂಘದ ಅಧ್ಯಕ್ಷರಾಗಿದ್ದರು. ಆ ಸಂಘದ ಅಧ್ಯಕ್ಷತೆಯಿಂದ ಅವರನ್ನು ನಿವೃತ್ತಿಗೊಳಿಸಿದಮೇಲೆ ಆ ಕಾರ್ಖಾನೆಯ ಕೆಲಸ ಕಾರ್ಯಗಳಿಗೆ ಅನೇಕ ತೊಂದರೆಗಳು ಉಂಟಾದವು, ಅದರ ಫಲವಾಗಿಯೇ, ಇನ್ನೊಂದು ಸಂಘ ಹುಟ್ಟಿಕೊಂಡಿತು. ಆ ಸಂಘಕ್ಕೆ ಬೆಂಬಲಗಳಿಸುವ ದೃಷ್ಟಿಯಿಂದ ಆ ಸಂಘದ ಮೇಲ್ವಿಚಾರಕರು ತಿಪ್ಪೇರುದ್ರಯ್ಯನವರು ಆ ಕಾರ್ಖಾನೆಯ ಅಧ್ಯಕ್ಷರಾದಮೇಲೆ ಅವರ ಮೇಲೆ ಅನೇಕ ವಿಧವಾದ ಪ್ರಭಾವಗಳನ್ನು ತರುವುದಕ್ಕೆ ಪ್ರಯತ್ನಪಟ್ಟರು ಎನ್ನತಕ್ಕ ಅಂಶವನ್ನು ವ್ಯಕ್ತಪಡಿಸಿದರು ಇದು ಎಷ್ಟುಮಟ್ಟಿಗೆ ನಿಜ ಎನ್ನತಕ್ಕದ್ದನ್ನು ನಾನು ಈ ಸಭೆಯಲ್ಲಿ ತಿಳಿಸಲು ಬಯಸುತ್ತೇನೆ. ಆ ಎರಡನೆಯ ಕೆಲಸಕಾರರ ಸಂಘ ಅಥವಾ ಲೇಬರ್ ಯೂನಿಯನ್ ಎಂದು ಏನು ಹೇಳಿದರೋ ಅದರ ಅಧ್ಯಕ್ಷ ನಾನು. 1954 ನೆಯ ಇಸವಿಯಿಂದ–ಎಲ್ಲ ವಿಷಯಗಳಿಗೂ ಹೋಗುವುದಿಲ್ಲ. . . . . .

Sri V. S. PATIL (Belgaum I).—On a point of order, Sir. Is it proper for the Minister concerned to remain absent from the House when the debate regarding his Ministry is going on in this House ?

Sri J. B. MALLARADHYA (Nanjangud).—There is not even the Deputy Minister.

Sri U. M. MADAPPA (Chamarajanagar).—That shows they are not caring for non-official resolutions, they care only for the Government business.

Sri T. MARIAPPA (Minister for Finance).—In fact I have been following the debate and I will make notes and pass it on to my Hon'ble colleague. He is perhaps in the other House.

Sri J. B. MALLARADHYA.—We have the greatest respect for the Finance Minister. But the point raised was that the Minister concerned, who was directly connected with this particular subject matter of the resolution is not present in this House. If he considers it not so important to be in this House when a matter like this is being discussed, when important issues are raised, it shows the amount of courtesy that he extends to those who have moved this resolution. I think it is a piece of injustice done to the whole House, not merely to the Opposition. I request the Chair to kindly see that such a thing does not repeat itself and that this particular resolution may be taken up when the concerned Minister comes back. It is one thing for the Finance Minister to plead on behalf of his colleague and say that he will pass on the notes to him for a suitable answer being given. But I believe in direct contacts and direct action.

Sri T. MARIAPPA.—Violent or non-violent ?

Sri J. B. MALLARADHYA.—I am a messenger of peace, Sir. (Laughter) In all these matters it is much better that direct action is resorted to than round about methods. Of course, I accept the statement of the Finance Minister that he will pass on the notes to the concerned Minister. But it is not a desirable method. I think we must establish very healthy conventions on the floor of this House. When an important resolution relating to a particular Minister is being discussed he must be present and if for any reason he is not able to be here, at least the Deputy Minister must be present.

Sri K. S. SURYANARAYANA RAO (Mysore City).—It is rather unfortunate that the Member should—I will not say he is casting aspersions—use a language that may not be correct. We know that the other House is also sitting. If we feel so sensitive about a particular Minister being not present here and present in the other House, we may not have the other House simultaneously. It is a suggestion for the Government to consider that when the lower House is in session the other House may not meet. There are two Ministers present here to follow and pass on the notes to the concerned Minister. If the whole Treasury Bench had been empty I understand the Hon'ble Member making the comment. But when two Ministers are in the House and when so many of us are here. . . . .

OPPOSITION MEMBERS.—Who are you ?

Mr. CHAIRMAN (SRI J. H. SHAMSUDDIN).—He has a right to express his own view.

Sri K. S. SURYANARAYANA RAO.—We may reply. I earnestly appeal to the Hon'ble Member not to press the point because two things cannot occupy the same space at the same time. The

(SRI K. S. SURYANARAYANA RAO)

Minister will have to be in one of the two Houses at one time only.

Unfortunately, the Labour Minister is a man without a Deputy Minister. Of course, the Industries Minister could have had his Deputy here.

(At this juncture the Industries Minister entered the House).

Fortunately, the Industries Minister is coming here now.

Sri J. B. MALLARADHYA.—By way of personal explanation, I do not know which portion of my speech casts any aspersion on the Industries Minister. The Industries Minister knows better than anybody else that my affection and respect for him is greater than that of anybody else and I would be the last man to cast any aspersion on the floor of the House for any reason even when such a thing is due. I would not go to that length. What prompted my friend to make a reference to that, I do not know. He should not have classified me in that category of persons who make personal attacks. I will not do that. Even if I attack, I will do it in a graceful manner.

Sri T. MARIAPPA.—In the first instance, because the Hon'ble Members desire the presence of the Home Minister, I said we would send for him and pass on the notes to him. My submission on this occasion is that we have joint responsibility. Therefore, in this particular case, even if my Hon'ble colleague is absent, I am competent to handle this subject. In fact, I want to intervene in the debate and tell the House that after all the resolution is not at all sustainable. Therefore, I am fully posted with all the facts relating to this particular industry and in particular I have had something to do with the Spun Silk Industry. Therefore, if he was busy in the other House, I would have answered. Anyhow, it is good that he has come and he will take charge of it.

Sri J. B. MALLARADHYA.—In view of what the Hon'ble the Finance Minister has said that this is not maintainable, we would like to hear on that point and proceed further with the discussion.

Sri V. S. PATIL.—Whenever a particular subject is discussed in this House, the concerned Minister must remain present. Otherwise, it will amount to a breach of privilege or contempt of this House.

Mr. CHAIRMAN.—The first question is, what is the definition of a Minister. Under the Rules, 'Minister' means a member of the Council of Ministers and includes any member to whom such Minister may delegate any functions assigned to him under these rules. So, naturally there is no distinction between the Minister of one Department and the Minister of another Department. Of course, it is generally expected of a Minister to be present when the Department under his charge is being discussed. In this connection, I should like to refer to a ruling given in respect of demands by the Speaker in the Lok Sabha. It has been held there that if a Minister who is concerned with the demand under discussion is present, it is sufficient. The whole Cabinet or other members may not be present. It is a healthy convention that the Minister concerned with a Department which is under discussion should be present and now as he is present, the point of order does not survive or is of no practical importance.

Sri J. B. MALLARADHYA.—What about the sustainability of the resolution?

Mr. CHAIRMAN.—That is one of the arguments against the resolution. He will deal with it in due course.

Sri K. P. REVANNA SIDDAPPA (Tiptur).—What is the time limit?

Mr. CHAIRMAN.—The rule is that no speech on a resolution except with the permission of the Speaker shall exceed 15 minutes. I am looking to the number of speeches. If there are less number of speakers, I will give more time.

*ಶ್ರೀ ಎ. ವಿ. ನರಸಿಂಹ ರೆಡ್ಡಿ.—1954ರ ಹಿಂದೆ ಈ ಕಾರ್ಖಾನೆಯ ಕೆಲಸಗಾರರ ಪರಿಸ್ಥಿತಿ ಹೇಗೆ, ಇತ್ತು ಎನ್ನುವಕ್ಕ ವಿಷಯವನ್ನು ನೂಕ್ಷ್ಮವಾಗಿ ತಿಳಿಸುವಕ್ಕಂಥಾದ್ದು ನಾನು ಮುಂದೆ ಪುಸ್ತಾಪ ಮಾಡ ಬೇಕೆಂದು ಇರುವ ವಿಷಯಕ್ಕೆ ಅವಶ್ಯಕವಾಗಿದೆ. 1954ರ ವರೆಎಗೆ ಚನ್ನಪಟ್ಟಣ ನ್ಪನ್‌ಸಿಲ್ಕ್ ಮಿಲ್ಲನ್ನಲ್ಲಿ ಒಂದೇ ಕಾರ್ಖಿಕರ ಸಂಘವಿತ್ತು. ಅದು ಲೇಬರ್

ಅಸೋಸಿಯೇಷನ್ ಎಂದು ನಾಮಧೇಯ ಹೊಂದಿತ್ತು. ಅವರಿಗೂ ಮ್ಯಾನೇಜಮೆಂಟಿನವರಿಗೂ ಕೆಲವು ವಿವಾದ ಉಂಟಾಗಿ ಅದು ಲೇಬರ್ ಟ್ರೈಬ್ಯೂನಲ್ ಮುಂದೆ ಹೋಯಿತು. 1954ರಲ್ಲಿ ಲೇಬರ್ ಟ್ರೈಬ್ಯೂನರ್ ಒಂದು ಅವಾರ್ಡ್ ಪಾಸ್‌ಮಾಡಿ ಕೆಲವು ಸೂಚನೆ ಕೊಟ್ಟರು. ಆಡಳಿತ ವರ್ಗದ ಕೆಲವು ಕ್ರಮಗಳು ಕ್ರಮಬದ್ಧವಾಗಿಲ್ಲ. ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿ ಬಿಟ್ಟದ್ದು ಸರಿಯಲ್ಲ. ಅವರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳಬೇಕು; ಹಾಗೂ ತೆಗೆದುಹಾಕಿದಂಥವರಿಗೆ ವರ್ಕಮೆನ್ಸ್ ಕಾಂಪೆನ್ಸೇಷನ್ ಕೊಡಬೇಕು, ಹೀಗೆ ಹೇಳಿ ಒಂದು ಅವಾರ್ಡ್ ಪಾಸ್‌ಮಾಡಿದ್ದಾರೆ. ಈ ಅವಾರ್ಡನ್ನು ಕಾರ್ಯಗತ ಮಾಡುವ ನಿಮ್ಮೇಶದಲ್ಲಿ ಮ್ಯಾನೇಜಮೆಂಟಿನವರು ಲೇಬರ್ ಅಸೋಸಿಯೇಷನ್ ಅಧಿಕಾರಿವರ್ಗವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿರುವ ಒಂದು ಅಂಶ ವ್ಯಕ್ತವಾಗುತ್ತದೆ. ಡಿಸ್‌ಮಿಸ್ ಮಾಡಿರತಕ್ಕಂಥಾದ್ದರಲ್ಲಿ ರಿಟ್ರೆಂಚ್‌ಮೆಂಟ್ ಮಾಡಿರುವದರಲ್ಲಿ ಅನ್ಯಾಯವಾಗಿದೆ ಎಂದು ದೂರು ಕೊಟ್ಟವರು. ಈ ಲೇಬರ್ ಅಸೋಸಿಯೇಷನ್ನಿನವರು ದೂರು ಕೊಟ್ಟಮೇಲೆ ಟ್ರೈಬ್ಯೂನಲ್ ಅವಾರ್ಡ್ ಪಾಸ್ ಮಾಡಿದ್ದನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ಲೇಬರ್ ಅಸೋಸಿಯೇಷನ್ ಅಧಿಕಾರಿವರ್ಗದವರಿಗೂ ಕಾರ್ಖಾನೆಯ ಮಾಲೀಕ ವರ್ಗದವರಿಗೂ ಒಂದು ಒಳಸಂಚು ಉಂಟಾದಂತೆ ವೇದ್ಯವಾಗುತ್ತದೆ. ಇಂಡಸ್ಟ್ರಿಯಲ್ ಟ್ರೈಬ್ಯೂನಲ್ ಅವಾರ್ಡನ್ನು ಕಾರ್ಯಗತ ಮಾಡಬೇಕು ಎಂದು ಮ್ಯಾನೇಜಮೆಂಟಿನವರ ಮೇಲೆ ಒತ್ತಾಯ ಮಾಡಬೇಕಾದುದು ಕರ್ತವ್ಯವಾಗಿತ್ತು. ಆ ಕರ್ತವ್ಯದಲ್ಲಿ ವಿಮುಖರಾದರು ಆಗ್ಗೆ ಕೆಲವು ಕಾರ್ಮಿಕರು ಸ್ವತಂತ್ರವಾಗಿ ಯೋಚನೆಮಾಡಲು ಪ್ರಯತ್ನ ಮಾಡಿದರು: ಅವರು ಲೇಬರ್ ಟ್ರೈಬ್ಯೂನಲ್‌ನಲ್ಲಿ ಹಕ್ಕುಗಳ ಬಗ್ಗೆ ಹೊಡೆದಾಡಿ, ಪಡೆದಿರತಕ್ಕಂಥ ಅವಾರ್ಡನ್ನು ಕಾರ್ಯಗತ ಮಾಡಿಸಬೇಕಾಗಿ ಇದ್ದಿತು. ಅವರ ಹಕ್ಕುಗಳನ್ನು ಸ್ಥಾಪನೆಮಾಡಿ ಮ್ಯಾನೇಜಮೆಂಟಿನವರಿಂದ ದೊರಕಿಸಿಕೊಳ್ಳಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮನವರಿಕೆಯಾಯಿತು: ಅದಕ್ಕಾಗಿ ಪ್ರತ್ಯೇಕ ಸಂಘ ಸ್ಥಾಪನೆ ಮಾಡಿಕೊಂಡರು. 1955ರ ಮೊದಲು ಭಾಗದಲ್ಲಿ ಲೇಬರ್ ಯೂನಿಯನ್ ಸ್ಥಾಪನೆ ಮಾಡಿಕೊಂಡು ಅವರು ಎಲ್ಲರೂ ಬೆಂಗಳೂರಿಗೆ ಬಂದು ನನಗೆ ಎಲ್ಲವನ್ನೂ ಹೇಳಿದರು. ಈ ಕಾರ್ಯರಂಗದಲ್ಲಿ ಕೆಲಸ ಮಾಡುವುದು ಏನೂ ನನಗೆ ಗೊತ್ತಿರಲಿಲ್ಲ. ವಿದ್ಯಮಾನವನ್ನು ಎಲ್ಲ ನನ್ನ ಮುಂದೆ ಇಟ್ಟಮೇಲೆ, ಲೇಬರ್ ಟ್ರೈಬ್ಯೂನಲ್ ಯಾವ ಅವಾರ್ಡ್‌ಮಾಡಿದ್ದಾರೆ, ಅದನ್ನು ಕಾರ್ಯಗತ ಮಾಡುವುದು ಮುಖ್ಯ ವಿಷಯವಾಗಿ ಇರುವದಾಗಿಯೂ ಯಾವ ಹೊಸ ವಿಷಯವೂ ಇರುವದಿಲ್ಲವೆಂದೂ, ಈ ಅವಾರ್ಡ್ ಕಾರ್ಯಗತ ಮಾಡಲು ಸಹಾಯ ಮಾಡಬೇಕು ಎಂದೂ ನನಗೆ ಹೇಳಿದರು. 'ಸಂಘದ ಅಧ್ಯಕ್ಷರಾಗಬೇಕೆಂದು ಕೇಳಿ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿಕೊಂಡರು. ಸರ್ಕಾರದ ಮುಂದಿರುವ ವಿಷಯ ಆಡಳಿತ ವರ್ಗದ ಅಧ್ಯಕ್ಷರ ಮುಂದಿರುವ ವಿಷಯ. ಕೇವಲ ಲೇಬರ್ ಟ್ರಿಬ್ಯೂನಲ್ ಯಾವ ಅವಾರ್ಡ್ ಪಾಸ್ ಮಾಡಿದೆಯೋ ಅದನ್ನು ಕಾರ್ಯಗತಮಾಡುವುದು ಮಾತ್ರ. ಅದರಲ್ಲಿ ಎರಡು ಮೂರು ಅಂಶಗಳಿವೆ. 90 ಜನ ನೌಕರರು, ಯಾರು ತೆಗೆದು ಹಾಕಲ್ಪಟ್ಟಿದ್ದಾರೆ, ಅವರನ್ನು ಪಾಪಸು ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬುದು ಒಂದು. 30 ಜನ ಸೂಪರ್‌ವೈಜರಿ ಸಿಬ್ಬಂದಿಯನ್ನು ಕಾರ್ಖಾನೆಗೆ ನಷ್ಟವಾಗುತ್ತದೆಂದು ಕೆಲಸದಿಂದ ತೆಗೆದಿದ್ದರು; ಮೊದಲು ಕಾರ್ಖಾನೆಯಲ್ಲಿ ವರ್ಕ್‌ಮೆನ್ ಆಗಿದ್ದವರು ಸೂಪರ್‌ವೈಜರುಗಳಾಗುತ್ತಾರೆ; ಅವರನ್ನು ಸಹ ಕೆಲಸಕ್ಕೆ ವಾಪಸು ತೆಗೆದುಕೊಳ್ಳಬೇಕು ಎಂದು ತೀರ್ಮಾನಮಾಡಿರುತ್ತಾರೆ. ಅದರ ಜೊತೆಗೆ ರಿಚ್ರೆಂಚ್ ಮಾಡುವಾಗ ಕಾಂಪೆನ್ಸೇಷನ್ ಕೊಡಬೇಕಾಗಿತ್ತು; ಅದನ್ನು ಕೊಟ್ಟಿಲ್ಲ, ಕೊಡಬೇಕು ಎಂದು ಹೇಳಿದ್ದಾರೆ. ಅವಾರ್ಡು ಪಾಸ್ ಮಾಡಿದ ಮೇಲೆ ಒಂದು ವರ್ಷಕಾಲ there must be truce between the management and the workers ಎಂದು ಕಂಡೀಷನ್ ಹಾಕಿದ್ದಾರೆ. ಈ ಕಂಡೀಷನ್ಸ್ ಪ್ರಕಾರ ಮ್ಯಾನೇಜ್‌ಮೆಂಟ್ ನಡೆಸಿಕೊಂಡು ಬಂದಿಲ್ಲವೆಂದು ಲೇಬರ್ ಅಸೋಸಿಯೇಷನ್ ಪ್ರಸ್ತಾಪಮಾಡಿಲ್ಲ; ಶ್ರೀ ವೆಂಕಟಪ್ಪನವರ ಹೆಸರನ್ನು ಪದೇ ಪದೇ ಏಕೆ ಪ್ರಸ್ತಾಪ ಮಾಡುತ್ತಾರೋ ಗೊತ್ತಿಲ್ಲ. ಶ್ರೀ ವೆಂಕಟಪ್ಪನವರು ಅಧ್ಯಕ್ಷಗಿರಿಯಿಂದ ನಿವೃತ್ತರಾದ ಮೇಲೆ ಕಾರ್ಮಿಕರೊಡನೆ ಸಂಪರ್ಕವಾಗಲಿ, ವ್ಯವಹಾರವಾಗಲಿ ಇಟ್ಟುಕೊಂಡಂತೆ ಕಾಣಲಿಲ್ಲ. ಆದರೂ ಪದೇ ಪದೇ ಅವರ ಹೆಸರನ್ನು ಪ್ರಸ್ತಾಪ ಮಾಡಲು ಕಾರಣವೇನೋ ಗೊತ್ತಿಲ್ಲ. ಲೇಬರ್ ಅಸೋಸಿಯೇಷನ್‌ನವರು ಮ್ಯಾನೇಜ್‌ಮೆಂಟಿನಿಂದ ತೊಂದರೆಯಾಗಿದೆಯೆಂದು ವ್ಯವಹಾರ ಹೂಡಿ ತೀರ್ಮಾನ ತೆಗೆದುಕೊಂಡು ಕಾರ್ಯಗತ ಮಾಡುವ ಸಮಯದಲ್ಲಿ ಲೇಬರ್ ಯೂನಿಯನ್ ಐ. ಎನ್. ಟಿ. ಯು. ಸಿ. ಗೆ ಅಫಿಲಿಯೇಟ್ ಆಗಲು ಅರ್ಜಿ ಹಾಕಿತು. ಮೊಟ್ಟಮೊದಲು ಮೊದಲಿದ್ದ ಸಂಘ ಸ್ಥಾಪನೆಯಾದಾಗ ಅದಕ್ಕೆ ಮೆಂಬರಾಗಿರಲಿಲ್ಲ. ನಾವು ಅರ್ಜಿಹಾಕಿದ ಆರುತಿಂಗಳ ಮೇಲೆ ಮೊದಲಿದ್ದ ಸಂಘ ತಾನೂ ಅರ್ಜಿ ಹಾಕಿತು. ನಾನು ಅಧ್ಯಕ್ಷನಾದ ಕೂಡಲೆ ಐ. ಎನ್. ಟಿ. ಯು. ಸಿ. ಗೆ ಸೇರಬೇಕೆಂದು ಈ ಸಂಘ ಅರ್ಜಿ ಹಾಕಿತು. ಈ ಎರಡು ಯೂನಿಯನ್‌ಗಳಲ್ಲಿ ಯಾವುದು ಸರಿಯಾಗಿ ಐ. ಎನ್. ಟಿ. ಯು. ಸಿ ತತ್ವಗಳಿಗನುನಾರವಾಗಿ ನಡೆದಿದೆ; ಯಾವುದು ಇಲ್ಲ ಎಂಬ ವಿಷಯ ಇವತ್ತಿನವರೆಗೂ ಗೊತ್ತಾಗಿಲ್ಲ. ಯಾವ ಒಂದು ಸಂಘವೂ ಈ ದಿವಸದವರೆಗೂ ಐ.ಎನ್. ಟಿ.ಯು.ಸಿ.ಗೆ ಅಧಿಕೃತವಾಗಿ ಸೇರಿಕೊಂಡಿಲ್ಲ. ಇಲ್ಲಿಯ ತನಕ ಯಾವ ಲೇಬರ್ ಅಸೋಸಿಯೇಷನ್ ಆಗಲಿ, ಯಾವ ಲೇಬರ್ ಯೂನಿಯನ್ ಆಗಲಿ ಐ. ಎನ್. ಟಿ. ಯು. ಸಿ. ಯ ಅಧಿಕೃತ ಸದಸ್ಯನಾಗಿಲ್ಲ. ಆಮೇಲೆ ಶ್ರೀ ತಿಪ್ಪೇರುದ್ರಯ್ಯನವರನ್ನು ಈ ಕಾರ್ಖಾನೆಗೆ ಅಧ್ಯಕ್ಷರನ್ನಾಗಿ ಮಾಡಿದ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಶ್ರೀ ಮರ್ಲಾರಾಧ್ಯರಿರಬೇಕು, ಅವರು ಈ ಕಾರ್ಖಾನೆಗೆ ಶ್ರೀ ತಿಪ್ಪೇರುದ್ರಯ್ಯನವರನ್ನು ನೇಮಿಸಿದ್ದು ಎಷ್ಟರಮಟ್ಟಿಗೆ ಸರಿಯೆಂದು ಅನುಮಾನವಿದೆ ಎಂದು ಒಂದು ರೀತಿ ಪ್ರಸ್ತಾಪಮಾಡಿದರು.

Sri J. B. MALLARADHYA.—I plead guilty to the charge, Sir.

ಶ್ರೀ ಎ. ವಿ. ನರಸಿಂಹರೆಡ್ಡಿ.—ಏಕೆ ಶ್ರೀ ತಿಪ್ಪೇರುದ್ರಯ್ಯನವರು ಅಧ್ಯಕ್ಷರಾಗಿದ್ದರು ಮುಂತಾದ ವಿಚಾರಗಳನ್ನು ಮಂತ್ರಿಗಳಿಗೆ ಬಿಡುತ್ತೇನೆ. ಅದು ನನ್ನ ವ್ಯಾಪ್ತಿಗೆ ಸೇರಿಲ್ಲ. ಅಂತೂ ಈ ಸಂದರ್ಭದಲ್ಲಿ ಒಂದು ಅಂಶ ಸ್ಪಷ್ಟವಾಗಿದೆ. ನಿವೃತ್ತರಾದ ಮೇಲೆ ಒಂದು ತರಹ ಜೀವನಡೆಸುವ ಶ್ರೀ ತಿಪ್ಪೇರುದ್ರಯ್ಯನವರಿಗೆ ಕಾರ್ಮಿಕರ ವ್ಯವಹಾರ ಕಟ್ಟಿಕೊಂಡು ಇಂಥ ಕಾರ್ಖಾನೆ ಮೇಲ್ವಿಚಾರಣೆ ನಡೆಸಲು ಯೋಗ್ಯತೆ ಯಿಲ್ಲವೆಂಬುದು ಸರ್ವವಿದಿತವಾದ ವಿಷಯ.

(Sri D. Devaraj Urs was walking across the floor.)

Mr. CHAIRMAN.—Order, order. Hon'ble Member may not cross the floor.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—On a point of order, Sir. ಈ ಸಭೆಯಲ್ಲಿಲ್ಲದಿರುವ ವ್ಯಕ್ತಿ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬಹುದೇ ಅಥವಾ ಕೂಡದೇ ಎಂಬ ವಿಷಯದಲ್ಲಿ ಅಧಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಹಾಗಿರುವಾಗ ಈ ಸಭೆಯಲ್ಲಿಲ್ಲದ ವ್ಯಕ್ತಿಯ ಯೋಗ್ಯತೆಯನ್ನು ಇಲ್ಲಿ ಅಳೆಯುವುದಕ್ಕೆ ಅವಕಾಶವಿದೆಯೇ?

Mr. CHAIRMAN.—Of course, the ruling of the Chair as I understood is that there should be no allegation or defamatory statement against a person who is not in this House. So far as I have heard the Hon'ble Member, he has not made any allegation. Qualification of a Chairman will be an issue when you discuss whether he is to continue or not. Therefore, discussion about qualification or competence of the Chairman to hold that post is a subject which is relevant and it is not allegation or defamatory to the person concerned.

ಶ್ರೀ ಎ. ಪಿ. ನರಸಿಂಹರೆಡ್ಡಿ.—ಈ ಕಾರ್ಖಾನೆಯಲ್ಲಿ ಉಂಟಾಗಿರುವ ಒಂದು ಪರಿಸ್ಥಿತಿ ಬಗ್ಗೆ ಲೇಬರ್ ಇಂಡಸ್ಟ್ರಿಯಲ್ ಟ್ರಿಬ್ಯೂನರ್ ಅವಾರ್ಡ್ ಪಾಸ್ ಮಾಡಿದ್ದಾರೆ. ಅದನ್ನು ಕಾರ್ಯಗತ ಮಾಡುವ ವಿಷಯವನ್ನು ಮಾನ್ಯ ಮಿತ್ರರು ಹೇಳುವುದಿಲ್ಲ, ಅಲ್ಲಿ ರಯಟಿಂಗ್ ಆಯಿತು, ಸ್ಟ್ರೇಇಕ್ ಆಯಿತು, ಲಾಕೌಟ್ ಆಯಿತು ಎಂದು ಹೇಳುತ್ತಾರೆ, ಇಂಡಸ್ಟ್ರಿಯಲ್ ಟ್ರಿಬ್ಯೂನರ್ ಅವಾರ್ಡ್ ಪಾಸ್ ಮಾಡಿದಮೇರೆ ಕಾರ್ಮಿಕರನ್ನು ಕಾರ್ಖಾನೆಗೆ ತೆಗೆದುಕೊಳ್ಳಬೇಕೆಂದು ಆಜ್ಞೆಯಾಯಿತು, ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದಾಗ ಲೇಬರ್ ಅಸೋಸಿಯೇಷನ್ ಲಾಕೌಟ್‌ಗೆ ಅವಕಾಶ ಮಾಡಿತು, ಲೇಬರ್ ಯೂನಿಯನ್ ಲಾಕೌಟ್‌ಗೆ ಅವಕಾಶ ಕೊಡಲಿಲ್ಲ. ಟ್ರಿಬ್ಯೂನರ್ ತೀರ್ಮಾನದಂತೆ ಕೆಲವರನ್ನು ಕೆಲಸಕ್ಕೆ ತೆಗೆದು ಕೊಳ್ಳಬೇಕೆಂದು ಪ್ರಯತ್ನ ಮಾಡಿದಾಗ ಅದಕ್ಕೆ ವಿರುದ್ಧವಾಗಿ ಲೇಬರ್ ಅಸೋಸಿಯೇಷನ್ ಪ್ರಯತ್ನ ಮಾಡಿದೆ. ಅದನ್ನು ಈ ಮಾನ್ಯ ಸಭೆಗೆ ವಿನಯದಿಂದ ತಿಳಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ಒಂದು ಸಣ್ಣ ಕಾರ್ಖಾನೆಯ ವ್ಯವಹಾರ ನಡೆಸುವಾಗ ಸಂಘದವರಿಂದ, ಆಡಳಿತವರ್ಗದಲ್ಲಿ ಹೆಚ್ಚು ಕಡಮೆಯಾಗಿದ್ದರೆ ಅದಕ್ಕೆ ಶ್ರೇಷ್ಠ ನ್ಯಾಯಾಸ್ಥಾನದ ಮುಖ್ಯಾಧಿಕಾರಿಗಳಿಂದ ಕೂಡಿದ ಒಂದು ಕಮಿಷನ್ ಮಾಡಿ ವಿಚಾರಣೆ ನಡೆಸಬೇಕೆಂದು ಹೇಳುವುದು ಅಷ್ಟು ಸಕಾರಣವಾಗಿ ಕಾಣುವುದಿಲ್ಲ. ಈ ರೀತಿ ಮಾಡುವುದು ನರಿಯೇ ಎಂಬ ವಿಷಯವನ್ನು ಮಾನ್ಯ ಮಿತ್ರರ ವಿವೇಚನೆಗೆ ಬಿಡುತ್ತೇನೆ. ಇನ್ನು ಹೆಚ್ಚಾಗಿ ಹೇಳದೆ ಇಷ್ಟು ಅವಕಾಶವಿತ್ತಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ,.....

Mr. CHAIRMAN—I would like to bring to the notice of the Hon'ble Members that I am pained to see a sort of anxiety being displayed by my Hon'ble friend (Shi B K. Puttaramiya). If he finds that there are certain allegations made and certain points raised, which the Hon'ble Member has no opportunity to correct–he is after all a party-man—he can set up another member to reply, instead of trying to interrupt the speaker at every stage. That is better.

Sri B. K. PUTTARAMIYA.—As a member, I have got every right to interrupt, Sir.

Mr. CHAIRMAN.—He can note down the points made by other speakers which he feels irksome and may ask some members of his Party to reply. That will be a better procedure. That will be smooth-sailing also.

4 P.M.

Sri V. S. PATIL (Belgaum).—Sir, the main portion of this resolution is to investigate into the details regarding the interference by the Government in the management of the Spun Silk Mills Ltd. If it is a fact that the Government has interfered in this particular company or the business of this Company and if it is a fact that this interference is not for the promotion or for the good of this particular Company, then certainly it is a great aspersion made against the Government. And in every Government institution or in every Government, *i.e.*, a democratic Government, when such serious allegations are being made it is the duty of the Government to clarify by appointing independent persons to enquire or investigate into these allegations. If the Government want to suppress all these things simply because they have got an over-whelming majority, that will never go to the credit of the ruling party. In order to make democracy thrive in our country or to have democratic institutions on sounder basis, I should like to appeal to the Government or to the Congress Party that when such serious allegations are made against them, it is their first duty to appoint such independent persons, if not the Chief Justice, at least a High Court Judge, or even a Sessions Judge, if they want to go down and to bring to the notice of the country and especially of this State that the allegations are not correct

or the allegations are unfounded. It is no use saying in this House on the strength of their majority or the thumping majority something and getting the resolution out-voted. It is not democratic. I submit that the Government should accede to this request and institute an enquiry commission to see whether the allegations made are correct or not, whether they are well-found or not and whether Government interference was there and if the interference was there, was it for the proper running of this particular Company or for some other purposes that have been alleged on the floor of this House.

So far as the general trend in our country regarding the interference of the Government in such private concerns is concerned, it is well-known. The Government always looks to the business which is flourishing, which is profitable and goes on interfering in it with some ulterior motives.

This Government has got only ten per cent share in the Company. When they have got only ten per cent share in the Company that they should try to interfere and force the majority to come to their decision is not proper. I submit that the ex-Chairman, it is said, was a very competent man, a very independent person and that no person on earth could influence him against his own conscience. Such a person has been forced to resign. That is the main allegation.

Secondly so far as such industries are concerned, the interference of the Government, I may say, interference of the Congress Party or the ruling party, is dangerous. If it is done on Governmental basis, then we can question it in this House. But if it is done on party lines it becomes very difficult. Recently we have read the debates in the Lok Sabha about this interference by interested party-men and so many concerns have gone down. Such a thing should not happen. I learn that this particular mill, Spun Silk Mills Limited, is the only concern of this sort in this State, not only in this State, but perhaps in the whole of the country. That is what I have learned.

Sri T. MARIAPPA.—In the East.

Sri V. S. PATIL.—If it is the case, much more interest must be taken by all to see that this Company is run on appropriate lines and is run for the benefit not only of the producers, but also of the consumers. Nothing that hampers its work should happen. This sort of interference on behalf of the Government or the party in power will spoil the administration of this Company.

It is said, Sir, that the Labour Association there is controlled by the Congress Party. Still I do not understand why they should have sprung up another association or organisation against the one that is controlled by the Congress. Is it because these Congressmen on that side are trying to get the spoils? The *INTUC* is practically a Congress Organisation. If it is in the hands of another party, then another organisation could be started. When the labour organisation is in the hands of the Congress Party, the ruling party, why has another organisation been started so far as the labourers are concerned? That creates doubt about the honesty and the *bona fides* of the rival organisation that has been started. That should also be enquired into. I submit, Sir, from both points of view, from the point of view of the administration of this particular Company and the welfare of the labourers of this concern, it is quite essential that an impartial enquiry should be made into these allegations and that report should be submitted to this House for further consideration.

